# ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ

**ಬಸವ ಭವನ, ಹೈಗ್ರೌಂಡ್ಸ್, ಬೆಂಗಳೂರು–560001**

**ಸಂಖ್ಯೆ: ಕರಾಆ/ಆಡಳಿತ/ದಾಖಲೆ ಶಾಖೆ/34/2019(ಭಾಗ–2)** **ದಿನಾಂಕ: 12.01.2022**

## ದರಪಟ್ಟಿಗಾಗಿ ಪ್ರಕಟಣೆ

**ವಿಷಯ:** **ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಭಿಲೇಖಾಲಯದಲ್ಲಿ ಶೇಖರಣೆ ಅವಧಿ ಮೀರಿರುವ 2011 ಹಾಗೂ 2012ನೇ ಸಾಲಿನ ಗ್ರಾಹಕ ವ್ಯಾಜ್ಯ ದೂರುಗಳು, ಮೇಲ್ಮನವಿಗಳು, ಜಾರಿ ಅರ್ಜಿಗಳು(ಇಪಿ), ಸಂಕೀರ್ಣ ಅರ್ಜಿಗಳು, ವರ್ಗಾವಣೆ ಅರ್ಜಿಗಳು(ಟಿ.ಎ.) ಹಾಗೂ ಇತರೆ ಸ್ವರೂಪದ ಕಡತಗಳನ್ನು ವಿಲೇವಾರಿ ಬಗ್ಗೆ**

**ಉಲ್ಲೇಖ:** **ರಾಜ್ಯ ಆಯೋಗದ ಸುತ್ತೋಲೆ ಸಂಖ್ಯೆ ಕರಾಆ/ದಾಖಲೆ ಶಾಖೆ/01/2004–05 ದಿನಾಂಕ 11.06.2019**

\- - - -

ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಭಿಲೇಖಾಲಯದಲ್ಲಿ ಶೇಖರಣೆ ಅವಧಿ ಮೀರಿರುವ 2011 ಹಾಗೂ 2012ನೇ ಸಾಲಿನ ಗ್ರಾಹಕ ವ್ಯಾಜ್ಯ ದೂರುಗಳು, ಮೇಲ್ಮನವಿಗಳು, ಜಾರಿ ಅರ್ಜಿಗಳು (ಇಪಿ), ಸಂಕೀರ್ಣ ಅರ್ಜಿಗಳು, ವರ್ಗಾವಣೆ ಅರ್ಜಿಗಳು (ಟಿ.ಎ.) ಹಾಗೂ ಇತರೆ ಸ್ವರೂಪದ ಕಡತಗಳನ್ನು ಹರಿದು ಸಂಗ್ರಹಿಸಿ ಮಾರಾಟ ಮಾಡುವ ಸಲುವಾಗಿ ದರಪಟ್ಟಿಯನ್ನು ಆಹ್ವಾನಿಸಲಾಗಿದೆ. ಮೇಲೆ ನಮೂದಿಸಿರುವ ಕಡತಗಳನ್ನು ಖರೀದಿಸಲು ಇಚ್ಚಿಸುವವರು ದರಪಟ್ಟಿಯನ್ನು ಒಳಗೊಂಡ ಲಕೋಟೆಯನ್ನು ಮೊಹರು ಮಾಡಿ, ಅದರ ಮೇಲೆ "ಹಳೆಯ ಕಡತಗಳ ಖರೀದಿಗಾಗಿ ದರಪಟ್ಟಿ" ಎಂದು ನಮೂದಿಸಿ, ಮೊಹರು ಮಾಡಿದ ದರಪಟ್ಟಿಯನ್ನು ರಿಜಿಸ್ಟ್ರಾರ್ ಮತ್ತು ಆಡಳಿತಾಧಿಕಾರಿಗಳು, ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಬಸವ ಭವನ, ಹೈಗ್ರೌಂಡ್ಸ್, ಬೆಂಗಳೂರು–560001, ಇವರಿಗೆ ದಿನಾಂಕ 31.01.2022ರ ಸಂಜೆ 5–00 ಘಂಟೆಯ ಒಳಗಾಗಿ ತಲುಪುವಂತೆ ಸಲ್ಲಿಸಲು ಸೂಚಿಸಿದೆ. ನಿಗದಿತ ದಿನಾಂಕ ಹಾಗೂ ಸಮಯದ ನಂತರ ತಲುಪುವ ದರಪಟ್ಟಿಗಳನ್ನು ಪರಿಗಣನೆಗೆ ತೆಗೆದುಕೊಳ್ಳದೇ ತಿರಸ್ಕರಿಸಲಾಗುವುದು. ಖರೀದಿಸಲು ಆಸಕ್ತಿಯುಳ್ಳವರು ಕಛೇರಿಯ ಸಮಯದಲ್ಲಿ ಖುದ್ದಾಗಿ ಹಾಜರಾಗಿ ಸದರಿ ದಾಖಲೆಗಳನ್ನು ಪರಿಶೀಲಿಸಬಹುದಾಗಿರುತ್ತದೆ. ಹೆಚ್ಚು ದರ ನಿಗದಿಪಡಿಸಿರುವುದನ್ನು ಪರಿಗಣಿಸಲಾಗುವುದು.

ದರಪಟ್ಟಿಯನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಥವಾ ಯಾವುದೇ ಕಾರಣ ನೀಡದೇ ಪ್ರಕಟಣೆಯನ್ನು ರದ್ದುಪಡಿಸುವ ಅಧಿಕಾರವನ್ನು ರಾಜ್ಯ ಆಯೋಗದ ರಿಜಿಸ್ಟ್ರಾರ್ ಮತ್ತು ಆಡಳಿತಾಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

ಮಾನ್ಯ ಅಧ್ಯಕ್ಷರ ಆದೇಶಾನುಸಾರ,

12/1/22

**(ರಾಜು.ಎನ್.)**
ರಿಜಿಸ್ಟ್ರಾರ್ ಮತ್ತು ಆಡಳಿತಾಧಿಕಾರಿಗಳು,
ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ,
ಬಸವ ಭವನ, ಬೆಂಗಳೂರು.

ಪ್ರತಿಗಳು:

1. ಮಾನ್ಯ ರಿಜಿಸ್ಟ್ರಾರ್, ನಗರ ಸಿವಿಲ್ ನ್ಯಾಯಾಲಯ, ಬೆಂಗಳೂರು – ಸಿವಿಲ್ ನ್ಯಾಯಾಲಯದ ಸೂಚನಾ ಫಲಕದಲ್ಲಿ ಪ್ರಕಟಿಸುವ ಬಗ್ಗೆ ಕ್ರಮವಹಿಸುವಂತೆ ಕೋರಿದೆ.
2. ಮಾನ್ಯ ಅಧ್ಯಕ್ಷರು, ಬೆಂಗಳೂರು ನಗರ, ಬೆಂಗಳೂರು ನಗರ 1ನೇ ಅಪರ, 2ನೇ ಅಪರ, 3ನೇ ಅಪರ ಹಾಗೂ 4ನೇ ಅಪರ ಜಿಲ್ಲಾ ಆಯೋಗ – ಸೂಚನಾ ಫಲಕದಲ್ಲಿ ಪ್ರಕಟಿಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವ ಸಲುವಾಗಿ.
3. ಟಿಎಸ್‌ಪಿ, ರಾಜ್ಯ ಆಯೋಗ – ರಾಜ್ಯ ಆಯೋಗದ ಜಾಲತಾಣದಲ್ಲಿ ಪ್ರಕಟಿಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವ ಸಲುವಾಗಿ.
4. ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸೂಚನಾ ಫಲಕಕ್ಕೆ.
5. ಕಛೇರಿ ಪ್ರತಿ.